ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 1817/2021

..............................................................

CW 03
PW 02

| | | |
|---|---|---|
| ಹೆಸರು | : | ನಾಗಪ್ಪ |
| ತಂದೆಯ ಹೆಸರು | : | ಭರಮಣ್ಣಾ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಶಿಕ್ಷಕ |
| ವಾಸಸ್ಥಳ | : | ನಂದಿಗದ್ದಾ |

ದಿನಾಂಕ 15-10-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 2 ನನಗೆ ಪರಿಚಯ. ಚಾಸಾ 10 ರವರ ಪರಿಚಯ ಇಲ್ಲ. ಸಾಕ್ಷಿಗೆ ಒಂಕು ದಾಖಲೆ ತೋರಿಸಿದ್ದು ಅದು ದಾಳಿ ಕಾಲದ ಪಂಚನಾಮೆ ಆಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 2 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು . ಸದರಿ ಸಹಿಯನ್ನು 2021 ರಲ್ಲಿ ಹಳಿಯಾಳ ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ನನಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೋ ಕೆಲಸಕ್ಕೆ ಠಾಣೆಗೆ ಹೋದಾಗ ಪೋಲಿಸರು ನನ್ನಿಂದ ಸಹಿ ಪಡೆದಿರುತ್ತಾರೆ. ಆರೋಪಿತರನ್ನು ಈ ಮೊದಲು ನೋಡಿಲ್ಲ. ಸಾಕ್ಷಿಗೆ ಮು ಮಾ 1 ರಿಂದ 3 ನ್ನು ತೋರಿಸಲಾಗಿ ಆತನು ಅವುಗಳನ್ನು ಈ ಹಿಂದೆ ನೋಡಿಲ್ಲ ಎಂದು ನುಡಿಯುತ್ತಾನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ನೀವು ದಿನಾಂಕ 13-09-2021 ರಂದು ಪೋಲಿಸರು ನಿಮ್ಮನ್ನು ಮತ್ತು ಚಾಸಾ 2 ರವರನ್ನು ಮುರ್ಕವಾಡದ ಬಸ್ ನಿಲ್ದಾಣದ ಸಮೀಪ ವಾಕಿಂಗ ಮಾಡುತ್ತಿದ್ದಾಗ ನಿಮ್ಮನ್ನು ಕರೆಸಿ, ಬಾತ್ಮಿ ವಿಷಯ ತಿಳಿಸಿ, ನಿಮ್ಮ ಒಪ್ಪಿಗೆಯ ಮೇರೆಗೆ ನಿಮ್ಮನ್ನು ಕರೆದುಕೊಂಡು ಹೋಗಿ, ಮುರ್ಕವಾಡ ಗ್ರಾಮದ ಬಸ್ ನಿಲ್ದಾಣದ ಸಮೀಪ ಇರುವ ಇಕೋ ಕ್ಲಬ್‌ನಲ್ಲಿ 2 ನೇ ಕೋಣೆಯಲ್ಲಿ ಅಂದರ - ಬಾಹರ ಆಡುತ್ತಿದ್ದುದನ್ನು ಗಮನಿಸಿ, ನಿಮ್ಮ ಸಮಕ್ಷಮ ಆರೋಪಿತರ ಮೇಲೆ ದಾಳಿ ಮಾಡಿ ಆರೋಪಿತರ ಅಂಗ ಜಪ್ತಿ ಮಾಡಿದಾಗ ಆರೋಪಿ ನಂಬರ 1 ರವರ ಹತ್ತಿರ 10 ಇಸ್ಪೀಟ್ ಎಲೆಗಳು, ರೂ. 8500 00 , ಆರೋಪಿ ನಂಬರ 3 ರವರ ಬಳಿ 1200-00 , ಆರೋಪಿ ನಂಬರ 4 ರವರ ಬಳಿ 11040-00 ರೂ, ಆರೋಪಿ ನಂಬರ 5 ರವರ ಬಳಿ 1300-00 ರೂ, ಆರೋಪಿ ನಂಬರ 6 ರವರ ಬಳಿ 1500-00 ರೂ, ಆರೋಪಿ ನಂಬರ 7 ರವರ ಬಳಿ 1650-00 ರೂ, ಆರೋಪಿ ನಂಬರ 8 ರವರ ಬಳಿ 1180-00 ರೂ, ಆರೋಪಿ ನಂಬರ 9 ರವರ ಬಳಿ 1250-00 ರೂ, ಆರೋಪಿ ನಂಬರ 10 ರವರ ಬಳಿ 1450-00 ರೂ, ಆರೋಪಿ ನಂಬರ 11 ರವರ ಬಳಿ 2200 ರೂ, ಆರೋಪಿ ನಂಬರ 12 ರವರ ಬಳಿ 2300-00 ರೂ, ಆರೋಪಿ ನಂಬರ 13 ರವರ ಬಳಿ 1320-00 ರೂ. ಸಿಕ್ಕಿದ್ದು, ಇಸ್ಪೀಟ್ ಮಂಡಲದ ಮೇಲೆ 3650-00 ರ. ಮತ್ತು 42 ಇಸ್ಪೀಟ್ ಎಲೆಗಳು ಸಿಕ್ಕಿದ್ದು ಒಟ್ಟು 28640-00 ಮತ್ತು 52 ಇಸ್ಪೀಟ್ ಎಲೆಗಳನ್ನು ಮತ್ತು ಮಂಡಕ್ಕಿ ಹಾಸಿದ ಚಾಪೆಯನ್ನು ನಿಮ್ಮ ಸಮಕ್ಷಮ ಜಪ್ತು ಪಡಿಸಿ, ರಾತ್ರಿ 12-15 ಗಂಟೆಯಿಂದ 2-15 ಗಂಟೆವರೆಗೆ ಪಂಚನಾಮೆ ಜರುಗಿಸಿ ಆರೋಪಿತರನ್ನು ವಶಕ್ಕೆ ಪಡೆದು ಸದರಿ ಪಂಚನಾಮೆಗೆ ನಿಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಕುರಿತು ಸಂಪೂರ್ಣ ಮಾಹಿತಿ ಇದ್ದರೂ ಸಹ, ಘಟನಾ ಜಾಗದಲ್ಲಿ ಪಂಚನಾಮೆಗೆ ಸಹಿ ಮಾಡಿದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು :</u>** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ )

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.